# ನನ್ನನ್ನು ನೋಡಿ ಒಮ್ಮೆ ನಕ್ಕುಬಿಡಿ...

ಇದನ್ನು ನೀವು ಓದ್ತಾ ಇದೀರಾ ಅಂದ್ರೆ ನನಗೆಷ್ಟು ಖುಷಿಯಾಗ್ತಿದೆ ಗೊತ್ತಾ? ಕಡೆಗೂ ನಿಮಗೆ ಇದನ್ನೆಲ್ಲ ಹೇಳುವ ಅವಕಾಶ ಸಿಗ್ತಲ್ಲಾ ಅಂತಾ ನಿರಾಳ ಭಾವ. ಇನ್ನೇನು ನಿಮ್ಮ ಬರುವಿಕೆಗೆ ಕಾಯೋದಷ್ಟೇ ಬಾಕಿ.

ಸುಮ್ನೆ ತಲೆಬುಡವಿಲ್ಲದೇ ಏನೇನೋ ಮಾತಾಡ್ತಾ ಇದೀನಿ ಅಂದ್ಕೊಳ್ಳೋಕೆ ಮುಂಚೇನೆ ಹೇಳಿಬಿಡ್ತೀನಿ. ನನಗೆ ನೀವು ಗೊತ್ತು, ಮತ್ತು ನಿಮಗೆ ನಾನು! ಹಾಗಂತ ನಿಮ್ಮ ಪರಿಚಯದವರ ಅಥವಾ, ಸ್ನೇಹಿತರ ಪೈಕಿ ಯಾರೋ ಅಲ್ಲ. ನಮ್ಮಿಬ್ಬರಿಗೂ ಪರಸ್ಪರ ಮುಖ ಪರಿಚಯ ಮಾತ್ರ ಇದೆ. ಯಾರಪ್ಪಾ ಈ ಮಹಾಶಯ ಅಂದ್ಕೋತಿದೀರೇನೋ ಅದನ್ನೂ ಹೇಳಿಬಿಡ್ತೀನಿ, ಮಡಿವಾಳ ಜಂಕ್ಷನ್‌ನಲ್ಲಿ ಎಡಗಡೆಯಲ್ಲಿರೋ ಫಳಫಳಿಸುವ ಬಸ್‌ನಿಲ್ದಾಣದಲ್ಲಿ ನೀವು ಅತ್ತಿತ್ತ ಸಂಚರಿಸುವಾಗಲೆಲ್ಲ ನಿಂತಿರ್ತೀನಲ್ಲ ಅದೇ ಯುವಕ! ನೀವು ಆ ರಸ್ತೆಯಲ್ಲಿ ಹೋಗಿ ಬರುವಾಗಲೆಲ್ಲ ಸರಿಯಾಗಿ ನಾನು ಬಸ್ಸಿಗೋ, ಯಾರಾದರೂ ಕೊಡಬಹುದಾದ ಲಿಫ್ಟ್‌ಗೋ ಕಾಯ್ತಾ ನಿಂತಿರ್ತೀನಿ.

ನೀವು ಕೆಲಸ ಮಾಡೋ ಆಫೀಸು ಕೋರಮಂಗಲದಲ್ಲೆಲ್ಲೋ ಇರಬೇಕು ಅಲ್ವಾ? ನನ್ನಂತೆಯೇ ವಾರಕ್ಕೆ ಬರೀ ಐದು ದಿನ ಅನ್ಸುತ್ತೆ ನಿಮ್ಮ ಕೆಲಸ? ದಿನಾ ನೀವು ಆಫೀಸಿಗೆ ಹೋಗುವಾಗಲೆಲ್ಲಾ, ಅತ್ತ ಕಡೆಯಿಂದ ಬರುವಾಗಲೆಲ್ಲಾ ಕಾದು ನಿಂತಿರುವ ನಮ್ಮನ್ನೇ ನೋಡುತ್ತ ಹೋಗುವುದು ನನಗೂ ಗೊತ್ತಿದೆ. ಬಸ್ ಸ್ಟಾಂಡಿನಲ್ಲಿ ನಿಂತಿರೋರನ್ನ ಯಾರು ಗಮನಿಸ್ತಾರೆ ಹೇಳಿ? ಈಗ್ಗೆ ಎರಡು ತಿಂಗಳಿನಿಂದ ನೀವು ಗಮನಿಸ್ತಾ ಇದೀರ ಅಂತ ಗೊತ್ತಾದಾಗ ಎಷ್ಟು ಖುಷಿಯಾಯ್ತು ಗೊತ್ತಾ? ಅದನ್ನು ನನ್ನ ಜೊತೆಯಲ್ಲಿದ್ದ ಹಿರಿಯರಿಗೂ ಹೇಳಿದೆ. ವಿಚಿತ್ರ ವ್ಯಕ್ತಿ ಇವರು. ಇವರ ದಿರಿಸು ಗಮನಿಸಿದರೆ ನಿಮಗೂ ಗೊತ್ತಾಗಬಹುದು, ತುಂಬಾ ಹಳೆಯ ಕಾಲದವರಂತೆ, ಖಾಸೆ ಪಂಚೆ, ತಲೆಮೇಲೆ ಸುತ್ತಿದ ರುಮಾಲು, ಹಣೆಯ ಮೇಲೆ ರಕ್ತ ಚಂದನದ ಉದ್ದುದ್ದದ ಗೆರೆ. ಒಂದೇ ಬಸ್‌ನಿಲ್ದಾಣದಲ್ಲಿ ಒಟ್ಟಿಗೇ ವರ್ಷಾನುಗಟ್ಟಲೇ ದಿನವೂ ಭೇಟಿಯಾಗಿ ನಾವಿಬ್ಬರೂ ತುಂಬ ಹತ್ತಿರದವರಾಗಿಬಿಟ್ಟಿದ್ದೇವೆ. ಇವರ ಪೂರ್ಣ ಜೀವನ ಚರಿತ್ರೆ ನನಗೆ ಗೊತ್ತು, ನನ್ನ ಒಳಹೊರಗೆಲ್ಲ ಇವರಿಗೂ ಗೊತ್ತು. ಕೆಲವೊಮ್ಮೆ ಸಿಕ್ಕಾಗ ನಮ್ಮಿಬ್ಬರ ನಡುವೆ ಮಾತನಾಡಲು ಮಾತುಗಳೇ ಉಳಿದಿರೋಲ್ಲ. ಹಾಗಾಗಿ ಈಚೀಚೆಗೆ ತುಂಬಾನೇ ಬೇಸರವಾಗ್ತಿತ್ತು.

ಈ ಒಂದು ತಿಂಗಳಿನಿಂದ ಮೆಲ್ಲಮೆಲ್ಲನೆ ನೀವು ನನ್ನ ಗಮನಕ್ಕೆ ಬಂದಿರಿ. ಮೊದಮೊದಲು ನೀವು ನಮ್ಮನ್ನು ಗಮನಿಸ್ತಾ ಇದೀರೋ ಇಲ್ಲವೋ ಅಂತ ಅನುಮಾನವಿತ್ತು. ಆದರೆ ತಿಂಗಳಿನಿಂದ ಪ್ರತೀ ಸಲ ನೀವು ಈ ರಸ್ತೆಯಲ್ಲಿ ಹಾದುಹೋಗುವಾಗ ನಮ್ಮನ್ನೇ ಗಮನಿಸ್ತಾ ಇದೀರಾ ಅನ್ನೊದು ಮೊನ್ನೆ, ನೀವು ನಿಮ್ಮ ವಾಹನದಲ್ಲಿ ಎಷ್ಟೋ ಮುಂದೆ ಹೋದರೂ ಹಿಂದಕ್ಕೇ ತಿರುಗಿ ತಿರುಗಿ ನೋಡ್ತಾ ಹೋದಿರಲ್ಲಾ, ಆವಾಗ ಖಾತ್ರಿಯಾಯ್ತು. ಅವತ್ತಂತೂ ಎಷ್ಟು ಖುಷಿಯಾಗಿತ್ತು ಗೊತ್ತಾ? ಅವತ್ತೇ ನಿಮ್ಮೆಡೆಗೊಂದು ಪರಿಚಯದ ನಗು ಬೀರೋಣ ಅಂದ್ಕೊಂಡಿದ್ದೆ, ಆದ್ರೆ ಸುಮ್‌ಸುಮ್ನೆ ಬಸ್‌ಸ್ಟಾಂಡ್‌ನಲ್ಲಿ ನಿಂತು ಹೋಗಿ ಬರುವವರ ಮುಖಕ್ಕೆಲ್ಲ ಒಂದೊಂದು ನಸುನಗು ಬಿಸಾಕಿದರೆ ಏನೆಲ್ಲ ಅಪಾರ್ಥ ಕಲ್ಪನೆ, ಅನರ್ಥ ಆಗಬಹುದು ಅಂತ ತಿಳಿದು ಸುಮ್ಮನಾದೆ. ಇದನ್ನೆಲ್ಲ ನಿಮಗೆ ಹೇಳಿ, ಪರಿಚಯ ಅಂತಾದ ಮೇಲೆ ನಕ್ಕರೇನು? ಕೈ ಅಡ್ಡ ಹಾಕಿ ಲಿಫ್ಟ್ ಕೇಳಿದರೇನು, ಅಲ್ವಾ?

ಅಸಂಗತವಾಗಿ ಏನೇನೋ ಮಾತಾಡ್ತಾ ಇದೀನಿ ಅಲ್ವಾ? ಇರ್ಲಿ ಬಿಡಿ, ಮೊದಲು ನನ್ನ ಕತೆ ಹೇಳಿಬಿಡ್ತೀನಿ, ಆಮೇಲೆ ಸದಾ ನನ್ನೊಂದಿಗೇ ಅದೇ ಬಸ್‌ಸ್ಟಾಂಡಿನಲ್ಲಿ ಕಾಯುತ್ತಿರುವ ಹಿರಿಯರ ಬಗ್ಗೆನೂ ಹೇಳಿಬಿಡ್ತೀನಿ, ಆಮೇಲೆ ಎಲ್ಲ ವಿಷಯ ನಿಮಗೇ ವಿಶದವಾಗುತ್ತೆ.

ಮೊದಲು ನಾನೂ ನಿಮ್ಮಂತೆಯೇ ಈ ದಾರಿಯಲ್ಲಿ ನನ್ನದೇ ಹೊಚ್ಚ ಹೊಸತಾದ ದ್ವಿಚಕ್ರವಾಹನದಲ್ಲಿ ತಿರುಗಾಡ್ತಾ ಇದ್ದೆ. ಕೋರಮಂಗಲ ಮೊದಲನೇ ಬ್ಲಾಕ್‌ನಲ್ಲೇ ಇರೋದು ನಮ್ಮ ಆಫೀಸು. ಎರಡು ವರ್ಷದ ಕೆಳಗೆ ನಾನು ಇದೇ ರಸ್ತೆಯಲ್ಲಿ ಅತ್ತಿತ್ತ ಓಡಾಡುವಾಗ ಇದೇ ಬಸ್‌ಸ್ಟಾಂಡಿನಲ್ಲಿ ಸದಾ ನಿಂತಿರುತ್ತಿದ್ದ ಈ ಹಿರಿಯರನ್ನು ಗಮನಿಸಲಾರಂಭಿಸಿದೆ. ಯಾರಾದರೂ ಯಾಕಾದರೂ ರಸ್ತೆಯಲ್ಲಿ ಸಿಕ್ಕುವ ಅಸಂಖ್ಯಾತ ಅಪರಿಚಿತರನ್ನೆಲ್ಲ ಗಮನಿಸ್ತಾರೆ ಹೇಳಿ? ಆದರೂ ಈ ಹಿರಿಯರು ನನ್ನ ಗಮನಕ್ಕೆ ಬೀಳಲು ಕಾರಣಗಳು ಹಲವಿದ್ದವು. ಮೊದಲನೆಯದಾಗಿ ಈ ಬಸ್ ನಿಲ್ದಾಣ – ಮೊದಲು ದ್ವಿಮುಖವಾಗಿದ್ದ ಈ ರಸ್ತೆ ನಂತರ ಏಕಮುಖವಾಗಿ, ಮುಂದಿರೋ ವೃತ್ತವನ್ನು ಬಳಸಿಕೊಂಡು, ಬಲಕ್ಕೆ ತಿರುಗುವ, ತಿರುಗಿ ಬರುವ ಹಲವಾರು ಸಂಚಾರಿ ನಿಯಮಗಳು ಬದಲಾದ ಮೇಲೆ, ಈ ನಿಲ್ದಾಣ ಆ ವೃತ್ತಕ್ಕೂ ಮುಂದಿರೋ ಪೆಟ್ರೋಲ್ ಬಂಕ್‌ನ ಪಕ್ಕಕ್ಕೆ ಎತ್ತಂಗಡಿಯಾಗಿದೆ. ಹಾಗಾಗಿ ಈಗ ಈ ಬಸ್ ನಿಲ್ದಾಣದಲ್ಲಿ ಯಾವ ಬಸ್ಸುಗಳೂ ನಿಲ್ಲುವುದಿಲ್ಲ. ಆದರೂ ತನ್ನ ಹಿಂದಿರುವ 'ಸಾಫ್ಟ್‌ವೇರ್' ಕಂಪನಿಯೊಂದರ ಕೃಪೆಯಿಂದಾಗಿ, ಸದಾ ಸ್ವಚ್ಛವಾಗಿ, ದೀಪಾಲಂಕೃತವಾಗಿ, ಜಾಹೀರಾತುಗಳಿಂದ ತುಂಬಿರುತ್ತದೆ. ಬಸ್ಸುಗಳೇ ನಿಲ್ಲದ ಇಂಥಾ ಬಸ್ ನಿಲ್ದಾಣದಲ್ಲಿ ಸದಾ ನಿಂತಿರುತ್ತಿದ್ದ ಈ ಹಿರಿಯರನ್ನು ನೋಡಿ ನನಗೆ ಆಶ್ಚರ್ಯವಾಯ್ತು. ಕೆಲವೊಮ್ಮೆ ಬೇರೆಯವರು ಆ ನಿಲ್ದಾಣದಲ್ಲಿ

ಇರುತ್ತಿದ್ದರೂ ಇವರಂತೆ ನಿರೀಕ್ಷೆಯಲ್ಲಿರುತ್ತಿರಲಿಲ್ಲ. ಇವರ ದಿರಿಸಿನ ಬಗ್ಗೆ ಆಗಲೇ ಹೇಳಿದೆನಲ್ಲ(ನೀವೂ ಗಮನಿಸಿರುತ್ತೀರಿ). ಯಾರೋ ವೃದ್ಧರು, ಬಸ್‌ನಿಲ್ದಾಣ ಪೆಟ್ರೋಲ್‌ಬಂಕಿನ ಮುಂದಕ್ಕೆ ಎತ್ತಂಗಡಿಯಾಗಿದೆ ಎನ್ನುವುದೂ ಗೊತ್ತಾಗದೇ ಇಲ್ಲೇ ನಿಂತಿದ್ದಾರಲ್ಲ ಎನ್ನುವುದು ನನ್ನ ಹಳಹಳಿಗೆ ಕಾರಣವಾಗಿತ್ತು. ವಾರಕ್ಕೆ ಐದು ದಿನ ನಾನು ಈ ರಸ್ತೆಯಲ್ಲಿ ತಿರುಗಾಡುವಾಗಲೆಲ್ಲ ಅವರು ಅಲ್ಲೇ ನಿಂತಿರುತ್ತಿದ್ದರು, ಕೆಲವೊಮ್ಮೆ ನಿಲ್ದಾಣದ ಬೆಂಚಿನ ಮೇಲೆ ಕುಳಿತಿರುತ್ತಿದ್ದರು, ದಿನಾ ಅದೇ ಶುಭ್ರ ದಿರಿಸು, ಹೆಗಲ ಮೇಲೊಂದು ಶಲ್ಯ, ಕಾಲುಗಳಲ್ಲಿ ಚರ್ಮದ ಚಪ್ಪಲಿಗಳು, ಯಾವಾಗಲೂ ಕೈಯಲ್ಲಿ ಬಟ್ಟೆಯದೊಂದು ಸಣ್ಣ ಚೀಲ.

ಮೆಲ್ಲಮೆಲ್ಲನೆ ಗಮನಿಸುತ್ತಿರುವುದು ಇವರ ಗಮನಕ್ಕೂ ಬಂದಿದೆ ಎನ್ನುವುದು ನನಗೆ ಗೊತ್ತಾಗಲಾರಂಭಿಸಿತು. ಆ ರಸ್ತೆಯಲ್ಲಿ ನಾನು ಹಾದುಹೋಗುವಾಗಲೆಲ್ಲ ನನ್ನನ್ನೇ ದಿಟ್ಟಿಸಿ ನೋಡಲಾರಂಭಿಸಿದರು. ನನಗ್ಯಾಕೋ ನನ್ನ ನಡುವಳಿಕೆಯಿಂದಲೇ ಇರಿಸುಮುರಿಸಾಗಲಾರಂಭಿಸಿತು. ಗೊತ್ತಾಗದಂತೆ ಗಮನಿಸುವುದು ಬೇರೆ. ಆದರೆ ನಾವು ಬೇರೆಯವರನ್ನ ಗಮನಿಸ್ತಾ ಇದೀವಿ ಅಂತ ಅವರಿಗೂ ತಿಳಿದು, ಅವರೂ ನಮ್ಮನ್ನು ಗಮನಿಸಲಾರಂಭಿಸುವುದು ಬಹಳ ಮುಜುಗರದ ವಿಷಯ. ಆದ್ರೂ ಪ್ರತೀ ದಿನ ಆ ರಸ್ತೆಯಲ್ಲಿ ಹಾದು ಹೋಗುವಾಗ ಇವತ್ತು ಅವರಿರ್ತಾರೋ ಇಲ್ಲವೋ ಅಂತೆಲ್ಲ ಮನಸಿನಲ್ಲೇ ಲೆಕ್ಕಾಚಾರ ಮಾಡಿಕೊಂಡು, ಬಸ್‌ನಿಲ್ದಾಣವನ್ನು ನೋಡಿಕೊಂಡೇ ಹೋಗುತ್ತಿದ್ದೆ. ಈ ಹಿರಿಯರು ದಿನಾ ಎಲ್ಲಿಂದ ಎಲ್ಲಿಗೆ, ಯಾಕಾದರೂ ಪ್ರಯಾಣಿಸುತ್ತಾರೋ, ಇದೇ ಬಸ್‌ನಿಲ್ದಾಣದಲ್ಲಿ ಯಾಕೆ ನಿಂತಿರುತ್ತಾರೋ ಅಂತೆಲ್ಲ ಯೋಚನೆ ಮಾಡುತ್ತಿದ್ದೆ. ಯಾವತ್ತಾದರೂ ಅವೇಳೆಯಲ್ಲಿ ನಾನು ಆ ರಸ್ತೆಯಲ್ಲಿ ಬಂದಾಗ ಇವರು ಇರುವುದಿಲ್ಲವೇನೋ ಎಂದುಕೊಳ್ಳುತ್ತಿದ್ದೆ. ಹೀಗೇ ಅವರನ್ನು ನೋಡಿ ನೋಡಿ, ಒಂದು ದಿನ ಇವರಿಲ್ಲದೇ ಈ ನಿಲ್ದಾಣವೊಂದೇ ಇದ್ದರೆ ಹೇಗನಿಸಬಹುದು ಅಂತೆಲ್ಲ ಯೋಚನೆಯಾಗುತ್ತಿತ್ತು. ಬಸ್ಸುಗಳು ನಿಲ್ಲದ ಆ ನಿಲ್ದಾಣವೂ, ಅಲ್ಲಿ ಸದಾ ಕುಳಿತಿರುವ ವೃದ್ಧರೂ ಪರಸ್ಪರರ ಅವಿಚ್ಛಿನ್ನ ಭಾಗಗಳಾಗಿ ಬಿಟ್ಟಿದ್ದಾರೇನೋ ಅನಿಸುತ್ತಿತ್ತು. ಕೆಲವೊಮ್ಮೆ ಅಲ್ಲೇ ಹಾದುಹೋಗುತ್ತಿರುವಾಗ ನನ್ನ ಗಾಡಿ ನಿಲ್ಲಿಸಿ, ಬಸ್‌ನಿಲ್ದಾಣ ಬದಲಾದ ಬಗ್ಗೆ ಇವರಿಗೆ ಹೇಳಿಬಿಡೋಣ ಅನಿಸುತ್ತಿತ್ತು. ಯಾರಿಗೆ ಗೊತ್ತು. ಈ ಹಿರಿಯರು ಈ ರೂಟ್‌ಗೆ ತುಂಬಾ ಹಳಬರಿರಬಹುದು, ಪರಿಚಿತರಾಗಿರುವ ಸಿಟಿ ಬಸ್ ಡ್ರೈವರ್‌ಗಳು, ಇವರು ಇಲ್ಲಿ ನಿಂತಿರುವುದನ್ನು ನೋಡಿ, ಇದೇ ಬಸ್ ನಿಲ್ದಾಣದಲ್ಲಿ ಇವರಿಗೋಸ್ಕರ ಬಸ್ ನಿಲ್ಲಿಸಬಹುದು...

ಅದೊಂದು ದಿನ ನಾನು ಕೆಲಸದಿಂದ ತುಂಬಾ ತಡವಾಗಿ ರಾತ್ರಿ ಹನ್ನೆರಡು ಗಂಟೆಗೆಲ್ಲ ವಾಪಸ್ಸು ಅದೇ ರಸ್ತೆಯಲ್ಲಿ ಬರುತ್ತಿದ್ದೆ. ಮಡಿವಾಳದ ಅದೇ ವೃತ್ತದ ಆಚೆ ಪಕ್ಕದ ಅದೇ ನಿಲ್ದಾಣದಲ್ಲಿ ಈ ಹಿರಿಯರು ಇನ್ನೂ ಕುಳಿತೇ ಇದ್ದರು! ತನ್ನ ಸುತ್ತಮುತ್ತಲಿನ ದೀಪಾಲಂಕಾರ ಪ್ರತಿಫಲಿಸದ ಕಲ್ಲು ಕಣ್ಣಿನ ವಿಗ್ರಹದಂತೆ, ಬಾರದ ಯಾರದೋ ನಿರೀಕ್ಷೆಯಲ್ಲಿ ಕುಳಿತ್ತಿದ್ದ ಇವರನ್ನು ನನಗೆ ಗಾಬರಿಯಾಗಿ ಹೋಯಿತು. ಹಿರಿಯರು ಕುರುಡರಿರಬಹುದೇನೋ, ಅಥವಾ ದಿನಾ ಅವರನ್ನು ಇಲ್ಲಿಂದ ಕರೆದೊಯ್ಯಲು ಯಾರಾದರೂ ಬರುತ್ತಿದ್ದರೇನೋ, ಇವತ್ತು ಬಂದಿಲ್ಲವೇನೋ, ನಾನೇ ನನ್ನ ಬೈಕ್ ಹಿಂತಿರುಗಿಸಿ ವಾಪಸ್ಸು ಹೋಗಿ ಕೇಳೋಣವೇನೋ ಅಂದುಕೊಂಡೆ. ಚಳಿ ಹೆಚ್ಚಾಗುತ್ತಿತ್ತು. ತಡವಾಗುವುದೆಂದು ಗೊತ್ತಿಲ್ಲದೇ ನನ್ನ ಜರ್ಕಿನ್ ಕೂಡಾ ತಂದಿರಲಿಲ್ಲ. ಬೆಳಿಗ್ಗೆ ಎಂಟಕ್ಕೇ ಮತ್ತೆ ಕೆಲಸಕ್ಕೆ ವಾಪಸ್ಸು ಬರಬೇಕು, ಈಗ ಆ ಹಿರಿಯರನ್ನು ಮಾತನಾಡಿಸಲು ಹೋದರೆ ಮನೆ ತನಕ ಬಿಡು ಅಂತ್ಹೇಳಿ, ಯಶವಂತಪುರವೋ, ಪೀಣ್ಯಾನೋ ಅಂತೆಲ್ಲ ಹೇಳಿದರೆ ಏನು ಗತಿ ಅಂತೆಲ್ಲ ನನ್ನ ಸ್ವಾರ್ಥದ್ದೇ ಯೋಚನೆ ಮಾಡಿಕೊಂಡು, ಸುಮ್ಮನೇ ಬಂದೇ ಬಿಟ್ಟೆ. ರಾತ್ರಿ ಗಸ್ತು ತಿರುಗುವ ಪೋಲಿಸ್ ವಾಹನಗಳು ನಿಲ್ಲಿಸಿ ಅವರನ್ನು ವಿಚಾರಿಸಬಹುದು, ವಿಚಾರಿಸಿ, ಅವರನ್ನು ಅವರ ಮನೆಯ ತನಕ ತಲುಪಿಸಿ ಬರಬಹುದು...

ಮಾರನೆಯ ದಿನ ಬೆಳಗ್ಗೆ ಎಂಟಕ್ಕೆ ಹೊರಡಬೇಕೆಂದುಕೊಂಡರೂ ತಡವಾಗಿಯೇ ಹೋಯಿತು. ಒಂಬತ್ತು ಮುಕ್ಕಾಲಿಗೆಲ್ಲ ಅದೇ ಮಡಿವಾಳ ಜಂಕ್ಷನ್ ಹತ್ತಿರ ಬಂದೆ. ವಾಹನ ದಟ್ಟಣೆ ಬಹಳವಾಗಿತ್ತು. ಆಮೆಗತಿಯಲ್ಲಿ ಬೈಕ್ ಓಡಿಸುತ್ತ ಆ ಬಸ್ ನಿಲ್ದಾಣದ ಹತ್ತಿರ ಬಂದೆ. ಅಲ್ಲಿ ಯಥಾಪ್ರಕಾರ ಇವರು ಕುಳಿತಿದ್ದರು. ರಾತ್ರಿ ಮನೆ ತಲುಪಿದ್ದುದರ ಕುರುಹಾಗಿ, ಅವರ ಶುಭ್ರ ಬಟ್ಟೆಗಳು, ದಣಿವಿಲ್ಲದ ಮುಖ ನೋಡಿ ನನಗೆ ನೆಮ್ಮದಿಯಾಯಿತು. ನಾನು ಗಮನಿಸುತ್ತಿದ್ದುದು ಗೊತ್ತಾಯಿತೇನೋ ಇವರು ನನ್ನನ್ನು ನೋಡಿ ನಕ್ಕರು. ನಾನೂ ನಸುನಕ್ಕೆ!

ಆಮೇಲೆ ಪ್ರತೀದಿನ ಇದೇ ದಿನಚರಿಯಾಯಿತು. ನಾನು ಆ ರಸ್ತೆಯಲ್ಲಿ ಹಾದು ಹೋಗುವಾಗಲೆಲ್ಲ ಇವರೆಡೆಗೆ ನೋಡಿ ಪರಿಚಯದ ನಗು ಬೀರುತ್ತಿದ್ದೆ. ಇವರೂ ನಗುತ್ತಿದ್ದರು. ಕೆಲವೊಮ್ಮೆ ನಾನು ಬರುವ ಸಮಯಕ್ಕೆ ಸರಿಯಾಗಿ, ಎದ್ದು ನಿಂತಿರುತ್ತಿದ್ದರು. ನಾನು ಅವರನ್ನು ಹಾದು ಮುಂದಕ್ಕೆ ಹೋದ ಮೇಲೆ ವಾಪಸ್ಸು ಹೋಗಿ ಕೂರುತ್ತಿದ್ದುದನ್ನು ನಾನು ನೋಡುತ್ತಿದ್ದೆ. ಕೆಲವೊಮ್ಮೆ ಇದೆಲ್ಲ ಹುಚ್ಚಾಟವೆನಿಸುತ್ತಿತ್ತು. ಅವರು ಯಾರೋ? ನಾನು ಯಾರೋ? ಯಾಕಾದರೂ ನಾವಿಬ್ಬರೂ ಪರಸ್ಪರ ಇರುವಿಕೆಯನ್ನು ನಸುನಗುವಿನ ಮೂಲಕ ವ್ಯಕ್ತಪಡಿಸುತ್ತಿದ್ದೆವೋ?

ಅದೊಂದು ದಿನ ಬೆಳಿಗ್ಗೆ ನನ್ನ ಆಫೀಸಿಗೆ ತುಂಬಾನೇ ತಡವಾಗಿತ್ತು. ಹತ್ತೂ ಮುಕ್ಕಾಲರ ಹೊತ್ತಿಗೆ, ಸ್ವಲ್ಪ ಬೇಜವಾಬ್ದಾರಿಯಿಂದಲೇ ನನ್ನ ಬೈಕ್ ಓಡಿಸುತ್ತ ಮಡಿವಾಳ ಜಂಕ್ಷನ್‌ಗೆ ಬಂದೆ. ಬಸ್ ನಿಲ್ದಾಣದ ಹಿರಿಯರು ಹೊರಬಂದು ರಸ್ತೆಯಂಚಿನಲ್ಲಿ ನಿಂತಿದ್ದರು. ಅವರೆಡೆಗೆ ಪರಿಚಯದ ನಗುಬೀರುವ ವ್ಯವಧಾನವೂ ನನ್ನಲ್ಲಿರಲಿಲ್ಲ. ನಾನು ನಿರೀಕ್ಷಿಸಿರದಂತೆ ಅವರು ತಟ್ಟನೆ ತನ್ನ ಕೈಚಾಚಿ, ನನಗೆ ನಿಲ್ಲಿಸಲು ಸಂಜ್ಞೆಮಾಡಿದರು. ನನಗೆ ನಿಲ್ಲಿಸುವಷ್ಟು ತಾಳ್ಮೆಯೂ ಇರಲಿಲ್ಲ. ಅದೇ ವೇಗದಲ್ಲಿ ಬಸ್

ನಿಲ್ದಾಣವನ್ನೂ ದಾಟಿ ಮುನ್ನುಗ್ಗಿದೆ, ಮುನ್ನುಗ್ಗಿದವನೇ ನನ್ನ ಮುಂದೆ ಸಾಗುತ್ತಿದ್ದ, ಹಟಾತ್ತನೇ ವೇಗ ಕಡಿಮೆ ಮಾಡಿಕೊಂಡ ಲಾರಿಯ ಹಿಂಬದಿಗೆ ಗುದ್ದಿಕೊಂಡು ಬಿದ್ದೆ!

ಆಚೀಚೆಯಿದ್ದ ಜನರೆಲ್ಲ ಓಡಿಬಂದರು, ನನ್ನನ್ನು ಎತ್ತಿ ರಸ್ತೆಯ ಪಕ್ಕಕ್ಕೆ ಕೂರಿಸಿದರು. ನನ್ನ ಬೈಕನ್ನು ಎತ್ತಿ ಪಕ್ಕಕ್ಕಿರಿಸಿದರು. ನನ್ನ ಎದೆ ಮುಟ್ಟಿ, ಕಣ್ಣು ಹಿಸಿದು ನೋಡಿದರು. ನನ್ನ ತಲೆ ಧಿಮ್ಮೆನ್ನುತ್ತಿತ್ತು. ಎಡ ಮಂಡಿಯಲ್ಲಿ ಕಿತ್ತು ತಿನ್ನುವಂತಹ ನೋವು. ಮೆಲ್ಲನೆ ಕಣ್ಣು ತೆರೆದು ಚುಚ್ಚುತ್ತಿದ್ದ ಎಡಗೈ ನೋಡಿಕೊಂಡೆ. ಬಿದ್ದ ಬೈಕ್‌ನ ಹ್ಯಾಂಡಲ್ ಜೊತೆಗೇ ಉಜ್ಜಿಕೊಂಡು ಹೋಗಿದ್ದ ಎಡಗೈ ತುಂಬೆಲ್ಲ ತರಚುಗಾಯ. ಪುಣ್ಯಕ್ಕೆ ಮತ್ತಿನ್ನೇನು ಪೆಟ್ಟಾಗಿರಲಿಲ್ಲ. ಜನರೆಲ್ಲ ತಲೆಗೊಂದರಂತೆ ಮಾತನಾಡುತ್ತಿದ್ದರು. ನಾನು ಮೆಲ್ಲನೆದ್ದೆ. ಎಡಗಾಲು ಎತ್ತಿಡಲೂ ಆಗುತ್ತಿರಲಿಲ್ಲ. ಹಲ್ಲು ಕಚ್ಚಿಕೊಂಡು, ಕುಂಟುತ್ತ, ಜನ ಸಂದಣಿಯಿಂದ, ಏರುತ್ತಿದ್ದ ಬಿಸಿಲಿನಿಂದ ತಪ್ಪಿಸಿಕೊಳ್ಳಲು, ಹಿಂದಿದ್ದ ಅದೇ ಬಸ್ ನಿಲ್ದಾಣಕ್ಕೆ ಬಂದೆ. ಹಿರಿಯರು ಅಲ್ಲೇ ಕುಳಿತಿದ್ದರು. ನನ್ನನ್ನು ನೋಡುತ್ತಲೇ ಓಡಿಬಂದರು. ನನ್ನ ಬಲ ಹೆಗಲಿಗೆ ಹೆಗಲು ಕೊಟ್ಟು, ಕರೆದೊಯ್ದು ಬೆಂಚಿನ ಮೇಲೆ ಕೂರಿಸಿದರು. ಬಿದ್ದ ನೋವಿಗೆ, ಬಿಸಿಲಿಗೆ ತಲೆ ತಿರುಗುತ್ತಿತ್ತು. "ಅಯ್ಯಯ್ಯೋ ತುಂಬಾನೇ ಪೆಟ್ಟಾಗಿದೆಯಲ್ಲಪ್ಪಾ!" ಅಂತ ಅವರು ಅವಲತ್ತುಕೊಳ್ಳುವಷ್ಟರಲ್ಲಿ ಕಣ್ಣುಕತ್ತಲಿಟ್ಟು ಕುಸಿದು ಬಿದ್ದೆ.

ಎಚ್ಚೆತ್ತಾಗ ಆಗಲೇ ಸಂಜೆಯಾಗುತ್ತಿತ್ತು! ಎಡಭುಜ ಅಲುಗಾಡಿಸದಷ್ಟು ಜಡವಾಗಿ ಹೋಗಿತ್ತು. ತಲೆ ಭಾರವಾಗಿತ್ತು. ಎಡಗೈಯ ತರಚುಗಾಯಗಳಿಂದೆಲ್ಲ ರಕ್ತ ಸೋರಿ, ಅಂಟಂಟಾಗಿತ್ತು. ದೂರದಲ್ಲಿ ನೋಡಿದೆ, ಪೆಟ್ರೋಲ್ ಬಂಕಿನ ಮುಂದೆ ನನ್ನ ಬೈಕ್ ಒಬ್ಬಂಟಿಯಾಗಿ ನಿಂತೇ ಇತ್ತು. ಬಾಯೆಲ್ಲ ಒಣಗಿ, ಗಂಟಲು ಕಡಿಯುತ್ತಿತ್ತು. ಆ ಹಿರಿಯರು ಪಕ್ಕದಲ್ಲೇ ಇದ್ದರು. ಬಂದು ನಿಲ್ದಾಣದ ಕಲ್ಲು ನೆಲದ ಮೇಲೆ ಮಲಗಿದ್ದ ನನ್ನನ್ನು ಎತ್ತಿ ಕೂರಿಸಿದರು. "ಏನೂ ಆಗೊಲ್ಲ, ಗಾಬರಿಯಾಗಬೇಡ, ಎಲ್ಲ ಸರಿಹೋಗುತ್ತೆ." ಅಂದರು. ತಮ್ಮ ಬಟ್ಟೆಯ ಚೀಲದಿಂದ ಪ್ಲಾಸ್ಟಿಕ್‌ನ ಹಳೆಯ ಕಾಲದ ವಾಟರ್ ಬಾಟಲ್ ತೆರೆದು ನನ್ನ ಬಾಯಿಗೆ ನೀರು ಬಿಟ್ಟರು. ನಾನು ಮತ್ತೆ ಸ್ಮೃತಿ ತಪ್ಪಿದೆ.

ಎಚ್ಚರಾದಾಗ ರಾತ್ರಿಯಾಗಿತ್ತು. ಸಮಯ ಎಷ್ಟಾಗಿತ್ತೋ ಗೊತ್ತಾಗಲಿಲ್ಲ. ದಿನವಿಡೀ ಗಿಜಿಗುಡುತ್ತಿದ್ದ ರಸ್ತೆಯೀಗ ತಣ್ಣಗೆ, ಬೇಟೆಯನ್ನು ನುಂಗಿ ಅರಗಿಸಿಕೊಳ್ಳುತ್ತ ಮಲಗಿರುವ ಹೆಬ್ಬಾವಿನಂತೆ ಬಿದ್ದಿತ್ತು. ಅಂಗಾತವಾಗಿ ಮಲಗಿದ್ದುದರಿಂದ ನಿಲ್ದಾಣದ ಛಾವಣಿಯಂಚಿನಲ್ಲಿ ಇಷ್ಟಗಲದ ಆಕಾಶ ಕಾಣುತ್ತಿತ್ತು. ಕಪ್ಪು ಆಕಾಶದಲ್ಲಿ ಕಣ್ಣು ಮಿಟುಕಿಸುತ್ತಿದ್ದ ಬೆಳ್ಳಿತಾರೆಗಳು, ತಣ್ಣನೆ ಗಾಳಿ, ಇಷ್ಟು ಹೊತ್ತಿಗಾಗಲೇ ನನ್ನ ಸ್ನೇಹಿತರಿಗೆ ಗೊತ್ತಾಗಿರಬಹುದೇನೋ? ಈ ಹಿರಿಯರಿಗೆ ಆಗಲೇ ಹೇಳಿ ಆಟೋವನ್ನಾದರೂ ತರಿಸಿ, ಯಾವುದಾದರೂ ಆಸ್ಪತ್ರೆ ಸೇರಿಕೊಳ್ಳಬೇಕಾಗಿತ್ತು. ತಲೆ ಈಗ ಭಾರವೇ ಇಲ್ಲದಷ್ಟು ಹಗುರವಾಗಿತ್ತು. ಜೋಮು ಹಿಡಿದಿದ್ದ ಕತ್ತನ್ನು ಮಲಗಿದ್ದಂತೆಯೇ ಅತ್ತಿತ್ತ ತಿರುಗಿಸಿ ನೋಡಿದೆ. ಆ ಅಂಚಿನ ಬೆಂಚಿನ ಮೇಲೆ ಆ ಹಿರಿಯರಿನ್ನೂ ಕುಳಿತೇ ಇದ್ದರು! ಕೈಕಟ್ಟಿಕೊಂಡು, ಅತ್ತಕಡೆಯಿಂದ ಬರಬಹುದಾದ ಯಾವುದಾದರೂ ವಾಹನಕ್ಕೆ ಕಾಯುತ್ತಿದ್ದರು ಅನಿಸುತ್ತೆ. ಪೋಲೀಸ್ ಗಸ್ತು ವಾಹನವಾದರೂ ಬಂದರೆ...

ನಾನು ಫಕ್ಕನೆ ಕಣ್ಣು ಬಿಟ್ಟೆ. ಆಗಲೇ ಬಿಸಿಲು ಹತ್ತಿತ್ತು. ಆ ಹಿರಿಯರು ಬಂದು ಆಗಲೇ ಕುಳಿತಿದ್ದರು. 'ಛೇ ಕೆಲಸ ಕೆಟ್ಟಿತು.' ಎಂದುಕೊಂಡು ಬಲ ಭುಜದ ಆಸರೆಯಿಂದ ಎದ್ದು ಕುಳಿತೆ. ಹಿರಿಯರು ನನ್ನ ಹತ್ತಿರ ಬಂದು ಕೈಯಲ್ಲಿದ್ದ ಬಾಟಲಿಯ ನೀರು ಕೊಟ್ಟರು. ರಾತ್ರಿ ಅವರು ನನ್ನನ್ನು ಇಲ್ಲಿಯೇ ಬಿಟ್ಟು ಹೊರಟುಹೋಗಿದ್ದರೇ? ಅವರು ಕೊಟ್ಟ ನೀರು ಕುಡಿದೆ, ಕ್ಷೀಣ ಧ್ವನಿಯಲ್ಲಿ "ಯಾವುದಾದರೂ ಆಟೋ ನಿಲ್ಲಿಸಿ" ಅಂದೆ. ಅವರು "ಎಲ್ಲ ಸರಿಹೋಗುತ್ತಪ್ಪ, ಸ್ವಲ್ಪ ಸುಧಾರಿಸ್ಕೋ" ಅಂದರು. ನಾನು ಮೆಲ್ಲನೆದ್ದು ಹಿಂದಿದ್ದ ಬೆಂಚಿಗೆ ಬೆನ್ನುಕೊಟ್ಟು ಕುಳಿತುಕೊಂಡೆ. ಬೆಂಚಿನ ಮೇಲಿದ್ದ ಪೇಪರ್ ನನ್ನ ಭುಜ ತಾಕಿತು. ಮೆಲ್ಲನೆ ಬಲಭುಜ ತಿರುಗಿಸಿ ಆ ಪೇಪರ್ ಎತ್ತಿಕೊಂಡೆ. ಆವತ್ತಿನದೇ ಪೇಪರ್, ಯಾರೋ ಓದಿ ಮರೆತು ಬಿಟ್ಟು ಹೋಗಿದ್ದರೇನೋ. ಚುಚ್ಚುತಿದ್ದ ಕಣ್ಣುಗಳನ್ನು ಅಗಲಿಸಿ ಓದಲಾರಂಭಿಸಿದೆ. ಮೊದಲನೇ ಪುಟದ ಕೆಳ-ಅಂಚಿನಲ್ಲಿ ಪುಟ್ಟದೊಂದು ಸುದ್ಧಿ, 'ರಸ್ತೆ ಅಪಘಾತದಲ್ಲಿ ಯುವಕನ ಸಾವು! ಕೆಳಗಡೆ ನನ್ನದೇ ಹೆಸರು... ವಯಸ್ಸು ೨೮! ಲಾರಿಗೆ ಹಿಂಬದಿಗೆ ಗುದ್ದಿ, ತಲೆಯೊಡೆದು ಮೊಟಾರ್‌ಬೈಕ್ ಸವಾರನ ಸಾವು. ಅದೇ ಸುದ್ಧಿಯ ಬಾಕ್ಸ್‌ನಲ್ಲಿ ಹೆಲ್ಮೆಟ್ ಇಲ್ಲದೇ ದ್ವಿಚಕ್ರ ವಾಹನ ಚಲಾಯಿಸಿ ಮೃತಪಟ್ಟವರ ಅಂಕಿ ಅಂಶಗಳು. ಹೆಲ್ಮೆಟ್ ಯಾಕೆ ಕಡ್ಡಾಯವಾಗಬೇಕು ಎಂಬುದರ ಬಗ್ಗೆ ಸುದ್ಧಿ ವಿಶ್ಲೇಷಣೆ!' ಹಾರುತ್ತಿರುವ ಹೃದಯದೊಂದಿಗೆ ಕತ್ತು ತಿರುಗಿಸಿ ದೂರದಲ್ಲಿ ಬೈಕು ನಿಲ್ಲಿಸಿದತ್ತ ನೋಡಿದೆ, ಬೈಕು ಅಲ್ಲಿರಲಿಲ್ಲ. ನಿನ್ನೆ ನಾನು ಬಿದ್ದಿದ್ದ ಜಾಗದಲ್ಲಿ ಇಷ್ಟಗಲದ ರಕ್ತದ ಕರೆ, ಪೆಟ್ರೋಲ್ ಬಂಕಿನ ಹುಡುಗರು ಬಕೇಟುಗಟ್ಟಲೆ ನೀರು ಚೆಲ್ಲಿದ್ದರೇನೋ ಇನ್ನಷ್ಟು ಅಗಲವಾಗಿತ್ತು. ನಖಶಿಖಾಂತ ನಡುಗುತ್ತ ಇತ್ತ ತಿರುಗಿ ಹಿರಿಯರೆಡೆಗೆ ನೋಡಿದೆ, ಅವರ ಪ್ರತಿಫಲನವಿಲ್ಲದ ಕಣ್ಣುಗಳಲ್ಲಿ ವಾತ್ಸಲ್ಯದ ಭಾವ, ತುಟಿಯಂಚಿನಲ್ಲಿ ಅದೇ ನಸುನಗು...

...

ಈ ಎರಡು ವರ್ಷಗಳಲ್ಲಿ ನಾನೂ, ಈ ಹಿರಿಯರೂ ಪರಸ್ಪರರ ಒಡನಾಡಿಗಳಾಗಿದ್ದೇವೆ. ಎತ್ತ ಹೋಗುವುದು, ಏನು ಮಾಡುವುದು ಅಂತ ಇಬ್ಬರಿಗೂ ಗೊತ್ತಿಲ್ಲ. ಇವರು ಇಪ್ಪತ್ತು ವರ್ಷಗಳ ಹಿಂದಿನಿಂದಲೂ ಈ ಬಸ್ ಸ್ಟಾಂಡಿನಲ್ಲಿ ನಿಲ್ಲುತ್ತಿದ್ದಾರಂತೆ,

ಇಲ್ಲಿಗೆ ಹೇಗೆ ಬಂದದ್ದು ಎಂಬುದೂ ಮರೆತು ಹೋಗಿದೆ. ನಾನು ಬಂದಿದ್ದು ಅವರಿಗೆ ತುಂಬಾ ಖುಷಿಯಾಯಿತಂತೆ. ಹೀಗೇ ಎರಡು ವರ್ಷಗಳಿಂದ ನಮ್ಮಿಬ್ಬರ ಮಾತು, ದಿನಗಳಾಗಿ, ವಾರಗಳಾಗಿ, ತಿಂಗಳುಗಳಾಗಿ ಹರಿದಿದೆ.

ಅದಕ್ಕೇ ಹೇಳಿದ್ದು, ನಮ್ಮಿಬ್ಬರ ನಡುವೆ ಈಗ ಮಾತುಗಳು ಉಳಿದಿಲ್ಲ. ಇದು ಅವರಿಗೂ ಗೊತ್ತಾಗಿದೆ. ಹಾಗಂತಲೇ ಈ ಬಸ್ಸು ನಿಲ್ಲದ ನಿಲ್ದಾಣಕ್ಕೆ ಬರುವ, ಬಂದು ಕುಳಿತು, ನಂತರ ಹೋಗಿಬಿಡುವ ನಾಲ್ಕಾರು ಜನರೊಂದಿಗೆ ನಾವು ಸಂವಹನಕ್ಕೆ ಪ್ರಯತ್ನಿಸಿ ಸೋತಿದ್ದೇವೆ. ಯಾರಿಗೂ ನಮ್ಮೆಡೆಗೆ ಲಕ್ಷ್ಯವೇ ಇಲ್ಲ. ಈ ಬಸ್ ನಿಲ್ದಾಣವನ್ನು ಬಿಟ್ಟು ಅತ್ತಿತ್ತ ಕದಲುವುದಕ್ಕೂ ನಮಗೆ ಸಾಧ್ಯವಾಗುತ್ತಿಲ್ಲ. ನಾನು ನಿಮ್ಮ ಬಗ್ಗೆ, ನಿಮ್ಮ ಗಮನದ ಬಗ್ಗೆ ಇವರಿಗೆ ಹೇಳಿದಾಗ ಮೊದಮೊದಲು ನಂಬಲೇ ಇಲ್ಲ. ಯಾಕೆಂದರೆ ಈ ಈ ಎರಡು ವರ್ಷಗಳಲ್ಲಿ ನಾವ್ಯಾರ ಕಣ್ಣಿಗೂ ಬಿದ್ದಿರಲಿಲ್ಲ. ನಂತರ ಅವರೂ ನಿಮ್ಮನ್ನು ಗಮನಿಸಿ ನೋಡಿ, ನೀವು ನಮ್ಮನ್ನು ಗಮನಿಸುತ್ತಿದ್ದೀರಿ ಎಂತಾದ ಮೇಲೆಯೇ ಖುಷಿಯಾದದ್ದು. ಅದಕ್ಕೇ ನನಗೆ ಹೇಳಿ ಇದೆಲ್ಲ ವಿಷಯವನ್ನು ನಿಮಗೆ ಹೇಗಾದರೂ ತಲುಪಿಸಬೇಕೆಂದು ಹೇಳಿದರು.

ಹಾಗಂತ ಇದನ್ನೆಲ್ಲ, ಹೀಗೆ ಬರೆದು, ಬರೆಯಿಸಿ ನಿಮಗೆ ಮುಟ್ಟಿಸಲು ಹೇಗೆ ಸಾಧ್ಯವಾಯಿತು ಅಂತ ಕೇಳ್ತೀರೇನೋ? ಅದೂ ಒಂದು ದೊಡ್ಡ ಕತೆ. ನೀವು ಇಲ್ಲಿಗೆ ಬಂದಾಗ ಅದನ್ನೆಲ್ಲ ಮಾತನಾಡೋಣ. ಇಬ್ಬರೊಂದಿಗೆ ಮೂರನೆಯವರು ಸೇರಿದರೇ ಅದೊಂದು ಗುಂಪು. ಇಬ್ಬರ ನಡುವೆ ಬರೀ ಮಾತು ಸಾಧ್ಯ. ಸಂವಹನ, ಹರಟೆ, ಚರ್ಚೆಗೆಲ್ಲ ಮೂವರಿದ್ದರೇನೇ ಚೆಂದ! ಏನಂತೀರಾ? ನಾಳೆ ಇತ್ತ ಕಡೆ ಬಂದಾಗ ಒಂದು ಪರಿಚಯದ ನಗೆ ಬೀರಿಬಿಡಿ. ನಮ್ಮ ಕಾಯುವಿಕೆಯ ಏಕತಾನತೆಗೆ ಸ್ವಲ್ಪವಾದರೂ ನೆಮ್ಮದಿ ಸಿಕ್ಕೀತು.

ನಾಳೆ ಇದೇ ರಸ್ತೆಯಲ್ಲಿ ನೀವು ಬಂದಾಗ ನಿಮ್ಮನ್ನು ನೋಡಿ ನಾನು ನಸುನಕ್ಕರೆ, ನೀವೂ ನಗ್ತೀರಾ ತಾನೇ?

**ಹ್ಯಾವ್ ಎ ನೈಸ್ ಡೇ**

**ಶಿವಕುಮಾರ ಕೆ. ಎಸ್.** ks_shivu@yahoo.com